ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
D. DEVARAJ URS BACKWARD CLASSES DEVELOPMENT CORPORATION
(ಕರ್ನಾಟಕ ಸರ್ಕಾರದ ಉದ್ಯಮ) (A Government of Karnataka Undertaking)

ಕ್ರಮಾಂಕ/No.: ದೇಹಿನಿ/ಸ/ನಿಯೋಮೌ/ಸಿಆರ್-30/2015-16 ದಿನಾಂಕ/Dated : 25/04/2019

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೆ,

ವಿಷಯ : ಕೆ.ಡಿ.ಪಿ. ಸಭೆಯಲ್ಲಿ ಚರ್ಚಿಸಿದಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವತಿಯಿಂದ ನಡೆಸಿದ ಅಧ್ಯಯನಗಳ ಮುಖ್ಯಾಂಶಗಳ ಮೇಲೆ ನಿಗಮದಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ.

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ: ಹಿಂವಕ 03 ಸಮನ್ವಯ 2019, ದಿನಾಂಕ:16/04/2019.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರದಲ್ಲಿ ಯೋಜನಾ ಇಲಾಖೆಯ ಮೌಲ್ಯಮಾಪನ ವರದಿ ಮತ್ತು ಶಿಫಾರಸ್ಸುಗಳ ಮೇಲೆ 2014-15ನೇ ಸಾಲಿನಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿಯನ್ನು ತಯಾರಿಸಿ ಕಳುಹಿಸಿಕೊಡುವಂತೆ ತಿಳಿಸಲಾಗಿರುತ್ತದೆ.

ನಿಗಮದಲ್ಲಿ ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ ಮತ್ತು ಗಂಗಾ ಕಲ್ಯಾಣ ನೀರಾವರಿ ಯೋಜನೆಗಳ ಮೌಲ್ಯಮಾಪನ ಕಾರ್ಯ ಮಾಡಿಸಲಾಗಿದೆ. ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯ ಮೌಲ್ಯೀಕರಣದ ಅಂತಿಮ ವರದಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಪರಿಶೀಲನೆಯಲ್ಲಿದೆ. ಉಳಿದ 3 ಯೋಜನೆಗಳ ಮೌಲ್ಯಮಾಪನದ ವರದಿಯ ಶಿಫಾರಸ್ಸುಗಳ ಮೇಲೆ ವಹಿಸಿರುವ ಕ್ರಮದ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು.

ನಂ. 16-ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು-52. # 16-D, 4th Floor, Devaraj Urs Bhavan, Millers Tank Bund Area, Vasanthanagar, Bangalore-52.
Ph.: 080 - 22374832, 22374834 Fax : 080 - 22374833, E-mail : md.dbcdc@gmail.com, Visit at : www.karnataka.gov.in/dbcdc

461

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು-52

Action Taken Report on Recommendations in Evaluation Report of KEA

II)

1. **Tide of the Project** : Evaluation of the Margin Money (Microcredit loan)(2016-17)
2. **Department** : D.Devaraj Urs Backward Classes Development Corporation Limited
3. **Consultant Organization:** Ecorys India Pvt. Ltd.

List 69
Sheets 8
Sl.no 69

| Sl. No. | Recommendation | Action Taken Report | |
|---|---|---|---|
| **Recommendation for implementation by Corporation:** | | | |
| 1 | It has been revealed by survey that beneficiaries incurred an expenditure of around Rs. 500 to Rs.1000 for getting the papers and to meet other expenditure for getting the assistance. Hence the corporation may suggest the PDC to organize the meeting of concerned department and issue the records to the beneficiaries of selected SHGs at the meeting venue itself. This would reduce the cost of getting the assistance to beneficiaries and also speed up the implementations. | ಫಲಾನುಭವಿಗಳು ಸಾಲ ಸೌಲಭ್ಯ ಪಡೆಯುವ ಸಂಬಂಧ ದಾಖಲಾತಿಗಳನ್ನು ಪಡೆಯಲು ಬೇರೆ ಬೇರೆ ಇಲಾಖೆಗಳಿಗೆ ಅಲೆದಾಟ ಅನಾವಶ್ಯಕ ವೆಚ್ಚವಾಗುವುದನ್ನು ತಡೆಗಟ್ಟಲು ಅಗತ್ಯ ಕ್ರಮವಹಿಸುವಂತೆ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಸೂಚನೆ ನೀಡಲಾಗಿರುತ್ತದೆ. ಸೌಲಭ್ಯ ಪಡೆಯುವಲ್ಲಿ ಪಡೆಯಬೇಕಾದ ದಾಖಲೆಗಳ ಸಂಖ್ಯೆ ಕಡಿಮೆ ಮಾಡಲಾಗಿರುತ್ತದೆ. ಸೌಲಭ್ಯ ಪಡೆಯಲು ಅರ್ಜಿ ನಮೂನೆಗಳನ್ನು ಸರಳೀಕರಣಗೊಳಿಸಲಾಗಿದೆ. | -- |
| 2 | The proposal of beneficiaries which helps to link backward to their/his/her existing tiny activity and expansion of existing trade be given priority in extending the assistance as it helps to utilization of assistance, sustainability of trade impact and faster upcoming eligible persons rather by the person without expertise where the rate of failure if found higher. Eg; In Udupi, the activity such as Jasmine cultivation and Dairy farming, petty trading by traditional beneficiaries are found with better impact and sustaining. | ಕಿರು ಸಾಲ ಯೋಜನೆಯಡಿಯಲ್ಲಿ ಸಣ್ಣ/ಅತಿ ಸಣ್ಣ ವ್ಯಾಪಾರ ಉದ್ದೇಶಗಳಿಗೆ ಸೌಲಭ್ಯ ನೀಡಲಾಗುತ್ತಿದೆ. ವ್ಯಾಪಾರದ ವಿಸ್ತರಣೆಗಾಗಿ ಇತರೆ ಚಟುವಟಿಕೆಗಳಿಗೆ ಜೋಡಿಸಲು ಉದಾ: ಹಾಲಿನ ವ್ಯಾಪಾರ ಕೈಗೊಂಡಿದ್ದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯತ್ವ ಕಲ್ಪಿಸಲು ಅಗತ್ಯ ಕ್ರಮ ವಹಿಸುವಂತೆ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಸೂಚನೆ ನೀಡಲಾಗಿರುತ್ತದೆ ಹಾಗೂ ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಸ್ವ ಸಹಾಯ ಗುಂಪಿನ ಉತ್ಪನ್ನಗಳ ಮಳಿಗೆ ಸ್ಥಾಪಿಸಲು ಫಲಾನುಭವಿಗಳನ್ನು ನಿಯೋಜಿಸಲಾಗುತ್ತಿದೆ. | -- |

| | | | |
|---|---|---|---|
| 3 | While extending the assistance all members of SHG should be considered equally for assistances. Assisting part of SHG members forces them to share the assistances with other thereby leading to part financing and creation of difference of opinion amongst the members leading to non functioning of the SHG. | ಆಯಾ ಫಲಾನುಭವಿಗಳಿಗೆ ಮಂಜೂರಾದ ಮೊತ್ತಕ್ಕಿಂತ ಕಡಿಮೆ ಮೊತ್ತ ವಿತರಣೆಯಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸುವಂತೆ ನಿಗಮದ ಎಲ್ಲಾ ವ್ಯವಸ್ಥಾಪಕರಿಗೆ ತಿಳಿಸಲಾಗಿರುತ್ತದೆ. ಆದಾಗ್ಯೂ ಈ ರೀತಿ ಮಾಡುವಾಗ ಸಂಘವು ವಿಭಜನೆಯಾಗದಂತೆಯೂ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. | -- |
| 4 | The Corporation should adopt the procedure of post sanction follow up through more vigorously through dedicated staff. The defaulter should be handled firmly to improve the scheme performance and show the credibility of scheme. | ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಸಾಲ ವಸೂಲಾತಿ ಕಾರ್ಯ ತೀವ್ರಗೊಳಿಸಲು ಅನುಕೂಲವಾಗುವಂತೆ, ನಿಗಮದ ಜಿಲ್ಲಾ ಕಛೇರಿಗಳಲ್ಲಿ ಸಿಬ್ಬಂದಿ ಸಾಮರ್ಥ್ಯ ಹೆಚ್ಚಿಸಲು 23 ಪ್ರಥಮ ದರ್ಜೆ ಸಹಾಯಕರು, 16 ದ್ವಿತೀಯ ದರ್ಜೆ ಸಹಾಯಕರನ್ನು ಕೆಪಿ.ಎಸ್.ಸಿ. ಮುಖಾಂತರ ನೇಮಕ ಮಾಡಿಕೊಂಡು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನೂ ಖಾಲಿಯಿರುವ ಸಿ ವೃಂದದ 201 ಹುದ್ದೆಗಳನ್ನು ಕೆ.ಪಿಎಸ್.ಪಿ. ಮುಖಾಂತರ ಭರ್ತಿ ಮಾಡಿಕೊಳ್ಳಲು ದಿನಾಂಕ:23/08/2017ರಂದು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. | -- |
| 5 | The corporation must provide the PLAY CARD depicting the silent features of scheme, loan component and repayment issues for hanging at the office of SHG/meeting hall to remind the members to make repayment and utilization of loan. The copies of play card be given to each member to exhibit this in their houses to remind them about the scheme. This should high light that the scheme is not entirely subsidy but given to improve their trade and business. | ಈ ಬಗ್ಗೆ ಸಾಲ ಮಂಜೂರಾತಿ ಆದೇಶದ ಪತ್ರದಲ್ಲಿ, ಪಾಸ್ ಪುಸ್ತಕದಲ್ಲಿ ಮತ್ತು ಸಾಲ ಮಂಜೂರಾತಿ ಪೂರ್ವ ಸಮಾಲೋಚನೆಯಲ್ಲಿ ಸ್ವ ಸಹಾಯ ಗುಂಪಿನ ಫಲಾನುಭವಿಗಳಿಗೆ ಮಾಹಿತಿ ನೀಡಲಾಗುತ್ತಿದೆ. ಅಲ್ಲದೇ ಪೂರ್ಣ ಮಾಹಿತಿ ನೀಡಲಿಕ್ಕಾಗಿಯೇ ಇ.ಡಿ.ಪಿ. ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಆದಾಗ್ಯೂ ಸ್ವ ಸಹಾಯ ಗುಂಪುಗಳ ಕಛೇರಿಯಲ್ಲಿ ಸದರಿ ಮಾಹಿತಿಯನ್ನೊಳಗೊಂಡ ಫಲಕಗಳನ್ನು PLAY CARD ಪ್ರದರ್ಶಿಸುವಂತೆ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಸೂಚನೆ ನೀಡಲಾಗಿರುತ್ತದೆ. | -- |

| **Recommendation for adoption – to get implemented by GOK:** | | | |
|---|---|---|---|
| 1 | The district office of corporation be positioned with required staff for ensuring proper IEC, processing of assistance and extending post release follow up. | ನಿಗಮದ ಜಿಲ್ಲಾ ವ್ಯವಸ್ಥಾಪಕರು ಘಟಕಗಳನ್ನು ನಿರಂತರವಾಗಿ ಪರಿಶೀಲಿಸುತ್ತಿದ್ದಾರೆ. ಇದಲ್ಲದೆ ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕರು ಹಾಗೂ ಕೇಂದ್ರ ಕಛೇರಿಯಿಂದ ಅಧಿಕಾರಿಗಳು ಭೇಟಿ ನೀಡಿದಾಗ ಘಟಕಗಳ ಪರಿಶೀಲನೆ ನಡೆಸಿ ಸಾಲದ ಹಣ ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲಾಗುತ್ತಿದೆ | -- |
| 2 | The assistance provided under the scheme is said to be insufficient for many vocations/activities and hence assistance could be increased and made activity specific. | ಕಿರು ಸಾಲ ಯೋಜನೆಯಡಿ ಸೌಲಭ್ಯ ಮೊತ್ತವನ್ನು ರೂ.15,000/-ಗಳಿಂದ ರೂ.25000/-ಗಳಿಗೆ ಹೆಚ್ಚಿಸಲು ದಿನಾಂಕ:24/05/2017ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರವು ಸದರಿ ಪ್ರಸ್ತಾವನೆ ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ. ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 2018-19ರ ಮಧ್ಯಂತರ ವರದಿಯ ಶಿಫಾರಸ್ಸಿನನ್ವಯ ಕಿರು ಸಾಲ ಯೋಜನೆಯ ಸೌಲಭ್ಯದ ಮೊತ್ತವನ್ನು ರೂ.15.000 ಗಳಿಂದ ರೂ.35.000 ಗಳಿಗೆ ಹೆಚ್ಚಿಸಲು ದಿನಾಂಕ 24/01/2019ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. | -- |
| 3 | Pre-assistance Training on entrepreneurship, skill development, business organization etc., be made one of the necessary conditions. The lack of training is one of the factor for failure of enterprise which are skill intensive. Many beneficiaries have expressed that they are not aware of activity to which they are assisted. The activities like Agrabathi manufacture in Chickmagalur had discontinued due to lack of market and skill in the trade. | ಸಾಲ ಮಂಜೂರಾತಿ ಪೂರ್ವ/ಸಾಲ ಮಂಜೂರಾತಿ ನಂತರ ನಡೆಸಲಾಗುವ ಸಮಾಲೋಚನೆಯಲ್ಲಿ ಸ್ವ ಸಹಾಯ ಗುಂಪಿನ ಫಲಾನುಭವಿಗಳಿಗೆ ಸಾಲದ ಹಣ ಸದುಪಯೋಗ ಪಡಿಸಿಕೊಂಡು ಘಟಕ ಸ್ಥಾಪಿಸುವ ಬಗ್ಗೆ, ಸಾಲದ ಕಂತುಗಳನ್ನು ಪಾವತಿಸುವ ಬಗ್ಗೆ ಹಾಗೂ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಅಲ್ಲದೇ ಪೂರ್ಣ ಮಾಹಿತಿ ನೀಡಲಿಕ್ಕಾಗಿಯೇ ಇ.ಡಿ.ಪಿ. ತರಬೇತಿಯನ್ನು ಆಯೋಜಿಸಲಾಗುತ್ತಿದೆ. | -- |

| | | | |
|---|---|---|---|
| 4 | There was also voice that few persons who are members in two SHGs got double assistance. Thus to avoid such duplicities, the selection of beneficiaries be made in Gramasaba by explaining the silent feature of scheme and making public of the scheme beneficiaries in the presence of Chairman of selection Committee. Hence suitable guidelines are required from Government to the district office of Corporation to ask the SHGs to directly submit application to Committees in Gramasabha rather getting through third party. The beneficiaries have expressed that presently with involvement of third person requires them to run around for getting selection process completed. | ಒಬ್ಬರೇ ಸದಸ್ಯರು ಎರಡು ಮೂರು ಸಲ ಸೌಲಭ್ಯ ಪಡೆದುಕೊಳ್ಳುವುದನ್ನು ತಡೆಗಟ್ಟಲು ಕಟ್ಟುನಿಟ್ಟಾಗಿ ಕ್ರಮವಹಿಸುವಂತೆ ಹಾಗೂ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಗಳ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ಜಿಲ್ಲಾ ವ್ಯವಸ್ಥಾಪಕರಿಗೆ ತಿಳಿಸಲಾಗಿರುತ್ತದೆ. ಇ.ಡಿ.ಪಿ. ತರಬೇತಿ ಸಮಯದಲ್ಲಿ ಕಾನೂನಿನ ಸಾಧಕ-ಭಾಧಕಗಳನ್ನು ಫಲಾನುಭವಿಗಳಿಗೆ ತಿಳಿಸಲಾಗುತ್ತದೆ. | -- |

.5...